# ಚಾರಿತ್ರಿಕ ಸಂದರ್ಭ– ಹೋರಾಟಗಳಲ್ಲಿ ಪಾಲ್ಗೊಳ್ಳುವ ಅವಕಾಶ ನನಗೆ ಸಿಕ್ಕಿತು

ತುಮಕೂರು ಜಿಲ್ಲೆಯ ಜೆಟ್ಟಿ ಅಗ್ರಹಾರದ ಅಗ್ರಹಾರ ಕೃಷ್ಣಮೂರ್ತಿ (ಜ: 1953) ಕಥೆ, ಕವಿತೆ, ಅಂಕಣ, ಕಾದಂಬರಿ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಯೋಗಶೀಲರು. ಪುಟ್ಟ ಊರು ಹಾಗೂ ಅಷ್ಟೇ ಪುಟ್ಟ ಸಮುದಾಯದಿಂದ ಬಂದ ಕೃಷ್ಣಮೂರ್ತಿ ಅವರು, ದೇಶದ ವಿವಿಧ ಭಾಷೆ–ಬರಹಗಾರರ ಜೊತೆಗೆ ಒಡನಾಡಿದವರು. ಮೆಲು ದನಿಯವರು, ಸಾಹಿತ್ಯದಲ್ಲೂ ಮೆಲು ದನಿಯನ್ನೇ ಮುನ್ನೆಲೆಗೆ ತರಲು ಪ್ರಯತ್ನಿಸುವವರು. ಪಿ. ಲಂಕೇಶ್, ಎಂ.ಡಿ. ನಂಜುಂಡಸ್ವಾಮಿ ಅವರ ಸಖ್ಯ ಹೊಂದಿದ್ದವರು. ಬರೆದಿರುವುದು ಕಡಿಮೆಯಾದರೂ, ಬರೆದುದೆಲ್ಲವೂ ಮುಖ್ಯವೆನ್ನಿಸುವಂತೆ ಬರೆಯುವವರು. ಹೊಸ ತಲೆಮಾರಿನೊಂದಿಗೆ ತಮ್ಮ ಅನುಭವ, ವಿಚಾರಗಳನ್ನು ಹಂಚಿಕೊಳ್ಳುವುದು ಬರವಣಿಗೆಯಷ್ಟೇ ಮುಖ್ಯ ಎಂದು ನಂಬಿದವರು. ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪುರಸ್ಕಾರ, ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಸೇರಿದಂತೆ ಹಲವು ಗೌರವಗಳು ಅವರಿಗೆ ಸಂದಿವೆ. ಆಕಾಶವಾಣಿಯಿಂದ ವೃತ್ತಿ ಆರಂಭಿಸಿದ ಅವರು, ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಸ್ಥಾನವನ್ನು ನಿರ್ವಹಿಸಿದರು. ‘ನೀರು ಮತ್ತು ಪ್ರೀತಿ’ ಅವರ ಪ್ರಸಿದ್ಧ ಕಾದಂಬರಿ. ‘ಬೆಳ್ದಿಂಗಪ್ಪನ ಪೂಜೆ’, ‘ನಾಡವರ್ಗಳ್’, ‘ಬಹುವಚನ’ ಹಾಗೂ ‘ಕಾಲ್ದಾರಿ’ ಅವರ ಪ್ರಮುಖ ಕೃತಿಗಳು. ಗುಜರಾತಿ ಲೇಖಕಿ ಹಿಮಾಂಶಿ ಇಂದುಲಾಲ್ ಶೆಲತ್ ಅವರ ಕಥೆಗಳನ್ನು ‘ರೆಕ್ಕೆಯಿಲ್ಲದ ಹಕ್ಕಿ’ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಕನ್ನಡದ ವಿಶಿಷ್ಟ ಪ್ರತಿಭೆ ಅಗ್ರಹಾರ ಕೃಷ್ಣಮೂರ್ತಿ ಅವರೊಡನೆ ಪ್ರಸಿದ್ಧ ವಿಮರ್ಶಕಿ ಎಂ.ಎಸ್. ಆಶಾದೇವಿ ಅವರು ‘ಮಯೂರ’ಕ್ಕಾಗಿ ನಡೆಸಿರುವ ಸಂದರ್ಶನದ ಆಯ್ದಭಾಗ ಇಲ್ಲಿದೆ.